2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 128/2017</u>

| | | | |
|---|---|---|---|
| ಸಾಕ್ಷಿದಾರರ ಹೆಸರು | - ಡಾ. ಕೆ.ಪಿ.ಹೆಬ್ಬಾರ್ | | ಪಿಡಬ್ಲೂ -06 |
| ತಂದೆಯ ಹೆಸರು | - ಲೇ ಕೆ.ಎನ್.ಹೆಬ್ಬಾರ್ | | ಸಿಡಬ್ಲೂ -11 |
| ವಯಸ್ಸು | - 71 ವರ್ಷ | | |
| ಉದ್ಯೋಗ | - ನಿವೃತ್ತ ವೈದ್ಯರು | | |
| ವಾಸ ಸ್ಥಳ | - ಚಿಕ್ಕಮಗಳೂರು | | |

ದಿನಾಂಕಃ 11.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನಾನು ಚಿಕ್ಕಮಗಳೂರು ಮಲ್ಲೇಗೌಡ ಜಿಲ್ಲಾ ಆಸ್ಪತ್ರೆಯಲ್ಲಿ ಏಪ್ರಿಲ್ 2015 ರಿಂದ ಮಾರ್ಚ್ 2017 ರವರೆಗೆ ಹಿರಿಯ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿಃ 01.06.2016 ರಂದು ರಾತ್ರಿ 8.50 ರ ಸಮಯದಲ್ಲಿ ಘ್ರಾಸಾ.1 ಕಿರಣ್ ಕುಮಾರ್ ಬಿನ್ ತಿಮ್ಮೆಗೌಡ ಎಂಬ 28 ವರ್ಷದ ವ್ಯಕ್ತಿಯು ಪತ್ನಿಯಿಂದ ಹಲ್ಲೆಗೆ ಒಳಗಾಗಿರುವ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಗಾಯಾಳುವನ್ನು ಆತನ ತಂದೆ ಆಸ್ಪತ್ರೆಗೆ ಕರೆತಂದಿದ್ದರು.

3. ಗಾಯಾಳು ಪ್ರಜ್ಞಾವಸ್ಥೆಯಲ್ಲಿ ಇದ್ದು ಘಟನೆಯ ಇತಿಹಾಸವನ್ನು ಸ್ವತಃ ನೀಡಿರುತ್ತಾರೆ. ನಾನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳಾಗಿರುವುದು ಮತ್ತು ಸ್ಥಿತಿ ಇರುವುದು ಕಂಡುಬಂತು.

Injuries: Knife is in Situ over Antirior Abdominal wall rightside.

2 prick marks ¼ cm on scalp on either side of the parital eminence usg-abdomen-knife Troversing the Antirior Abdominal wall right ambelical region and Omentum with its tip in mesentric fat.

Injury No.1 is grevious and injury No.2 is simple in nature.

4. ನಾನು ಗಾಯಾಳುವನ್ನು ಪರೀಕ್ಷಿಸಿ ನೀಡಿದ ಗಾಯದ ಪ್ರಮಾಣ ಪತ್ರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.9 ಎಂದು ಸಾಕ್ಷಿಯ ಸಹಿಯನ್ನು ನಿಪಿ.9(ಎ) ಎಂದು ಗುರುತಿಸಲಾಯಿತು. ಗಾಯಾಳುವಿಗೆ ಹೊಟ್ಟೆಗೆ ಚುಚ್ಚಿದ ಸ್ಥಿತಿಯಲ್ಲಿದ್ದ ಚಾಕುವನ್ನು ಅದೇ ಸ್ಥಿತಿಯಲ್ಲಿ ಬ್ಯಾಂಡೇಜಿನಿಂದ ಫಿಕ್ಸ್ ಮಾಡಿ ಹೆಚ್ಚಿನ ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ಕಳುಹಿಸಿದ್ದೇನೆ.

5. ಸಖರಾಯಪಟ್ಟಣ ಪೋಲೀಸರು ಒಂದು ಚಾಕುವನ್ನು ಹಾಜರುಪಡಿಸಿ ನಿಪಿ.9 ರಲ್ಲಿ ಹೇಳಿದ ಗಾಯಗಳ ಬಗ್ಗೆ ಅಭಿಪ್ರಾಯವನ್ನು ಕೇಳಿದ್ದರು.

6. ಗಾಯಾಳುವಿನ ಹೊಟ್ಟೆಗೆ ಚುಚ್ಚಿದ ಸ್ಥಿತಿಯಲ್ಲಿದ್ದ ಚಾಕುವನ್ನು ಬ್ಯಾಂಡೇಜ್ ಹಾಕಿ ಅದೇ ಸ್ಥಿತಿಯಲ್ಲಿ ಇಟ್ಟು ಕಳುಹಿಸಿದ್ದು, ಸದರಿ

ಚಾಕುವನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

7. ಮು.ಮಾ.1 ಚಾಕುವಿನಿಂದ ನಿಪಿ.9 ರಲ್ಲಿ ಹೇಳಿದ ಗಾಯಗಳಾಗುವ ಸಾಧ್ಯತೆ ಇದೆ ಎಂದು ನಾನು ಈಗ ತೋರಿಸಿದ ನಿಪಿ.10 ರಂತೆ ಸಖರಾಯಪಟ್ಟಣ ಪೋಲೀಸರಿಗೆ ನನ್ನ ಅಭಿಪ್ರಾಯ ನೀಡಿದ್ದೇನೆ. ನಿಪಿ.10 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ನನಗೆ ನೀಡಿದ ಚಾಕುವನ್ನು ಪುನಃ ಸೀಲು ಮಾಡಿ ತನಿಖಾಧಿಕಾರಿಗೆ ಹಿಂತಿರುಗಿಸಿದ್ದೇನೆ. ಮು.ಮಾ.1 ಚಾಕುವಿನಿಂದ ಹಲ್ಲೆ ನಡೆಸಿದ್ದರಲ್ಲಿ ವ್ಯಕ್ತಿಗೆ ನಿಪಿ.9 ರಲ್ಲಿ ಹೇಳಿದ ಮಾರಣಾಂತಿಕ ಗಾಯಗಳು ಆಗುವ ಸಾಧ್ಯತೆ ಇದೆ.

<u>ಪಾಟೀ ಸವಾಲುಃ ಶ್ರೀ ಬಿ.ಎಂ.ಎಲ್.ಜಿ., ಆರೋಪಿ ಪರವಾಗಿ</u>

8. ನಿಪಿ.9 ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ Omentum ಎಂದರೆ ತೆಳಗಿನ ಪೊರೆ ಎಂದು ಅರ್ಥೈಸಬಹುದು. Mesentric fat ಎಂದರೆ ಹೊಟ್ಟೆಯಲ್ಲಿರುವ ಚರ್ಬಿ ಎಂದು ಅರ್ಥೈಸ ಬಹುದು. ನಿಪಿ.9 ರಲ್ಲಿ ಹೇಳಿದ ಒಂದನೇ ಗಾಯವು ಒಬ್ಬ ವ್ಯಕ್ತಿ ಮುಗ್ಗರಿಸಿ ನೆಟ್ಟಗಿರುವ ಚಾಕುವಿನ ಮೇಲೆ ಬಿದ್ದರೆ ಆಗುವ ಸಾಧ್ಯತೆ ಇದೆ.

9. ಮಲ್ಲೆಗೌಡ ಜಿಲ್ಲಾ ಆಸ್ಪತ್ರೆ ಚಿಕ್ಕಮಗಳೂರು ಈಗ ಚಿಕ್ಕಮಗಳೂರು ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಕಾಲೇಜ್ ಎಂದು ಬದಲಾಗಿದೆ. 2015-16 ನೇ ಸಾಲಿನಲ್ಲಿ

ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿ ಸುಮಾರು 28 ಜನ ವೈಧ್ಯರು ಸೇವೆ ಸಲ್ಲಿಸುತ್ತಿದ್ದರು. ಆ ಸಮಯದಲ್ಲಿ ಪ್ರತಿಯೊಂದು ವಿಭಾಗಕ್ಕೂ ವಿಶೇಷ ತಜ್ಞರು ಕಾರ್ಯ ನಿರ್ವಹಿಸುತ್ತಿದ್ದರು. ಗಾಯಾಳುವಿನ ಹೊಟ್ಟೆಯಲ್ಲಿ ಇದ್ದ ಚಾಕುವನ್ನು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯಲ್ಲಿಯೇ ಹೊರತೆಗೆಯುವ ಸಾಧ್ಯತೆ ಇತ್ತು ಎಂದರೆ ಸಾಕ್ಷಿಯು ಮುಂದುವರೆದು ಹೊರತೆಗೆಯಬಹುದಾಗಿತ್ತು, ಆದರೆ ಆಸ್ಪತ್ರೆಯಲ್ಲಿ ಉಪಕರಣ ಗಳು ಮತ್ತು ಒಬ್ಬರೇ ಸರ್ಜನ್ ಕರ್ತವ್ಯ ನಿರ್ವಹಿಸುತ್ತಿದ್ದ ಕಾರಣಕ್ಕೆ ಅಂತಹ ಕಾರ್ಯಕ್ಕೆ ಮುಂದಾಗಿರಲಿಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಒಬ್ಬರೇ ಸರ್ಜನ್ ಇದ್ದರೂ ಮತ್ತು ಲಭ್ಯವಿರುವ ಸಲಕರಣೆಗಳು ಸಾಕಾಗುವುದಿಲ್ಲ ಎಂಬ ವಿಚಾರವನ್ನು ನಿಪಿ.9 ರಲ್ಲಿ ನಮೂದಿಸಿರುವುದಿಲ್ಲ.

10. ನಾನು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಮೇಲ್ದರ್ಜೆಯ ಆಸ್ಪತ್ರೆಗೆ ಕಳುಹಿಸಿದಾಗ ರಾತ್ರಿ ಸುಮಾರು 9.00-9.30 ಗಂಟೆ ಆಗಿರಬಹುದು. ಮೇಲ್ದರ್ಜೆಯ ಆಸ್ಪತ್ರೆಗೆ ಕಳುಹಿಸುವಾಗ ನಮ್ಮ ಆಸ್ಪತ್ರೆಯಿಂದ ಪತ್ರವನ್ನು ನೀಡಲಾಗುತ್ತದೆ.

11. ಮು.ಮಾ.1 ಚಾಕುವನ್ನು ಸಖರಾಯಪಟ್ಟಣ ಪೋಲೀಸರು ನನಗೆ ತೋರಿಸಲು ತರುವಾಗ ಸೀಲು ಮಾಡಲಾಗಿದ್ದನ್ನು ನಾನು ತೆರೆದು ನೋಡಿ ಪುನಃ ಸೀಲು ಮಾಡಿ ನೀಡಿದ್ದೇನೆ. ಮು.ಮಾ.1 ನ್ನು ಸೀಲಾದ ಸ್ಥಿತಿಯಲ್ಲಿ ತರುವಾಗ ಅದರಲ್ಲಿದ್ದ ಸೀಲು ಯಾವುದು ಎಂದು ನನಗೀಗ ನೆನಪಿಲ್ಲ.

12. ನಿಪಿ.10 ದಾಖಲೆಯನ್ನು ಪೋಲೀಸರು ಹೇಳಿ ನನ್ನಿಂದ ಬರೆಸಿಕೊಂಡಿದ್ದಾರೆ ಎಂದರೆ ಸರಿಯಲ್ಲ. ದಿಃ 01.06.2016 ರಂದು ನಾನು ಗಾಯಾಳು ಕಿರಣ್ ಕುಮಾರ ಈತನನ್ನು ಪರೀಕ್ಷಿಸಿ ನಿಪಿ.9 ಗಾಯದ ಪ್ರಮಾಣಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಕೋರಿಕೆ ಮೇಲೆ ನಿಪಿ.9 ರ ಪ್ರಮಾಣಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)
ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ